# ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸ್ಪೆಷಲ್ ಕೇಸ್ ನಂಃ 250/2023

| | ಚಾಸಾಃ 1 | ಅಸಾಃ 1 |
|---|---|---|
| ಹೆಸರು | ಚಿಕ್ಕೇಗೌಡ | |
| ತಂದೆಯ ಹೆಸರು : | ಅಣ್ಣಪ್ಪಗೌಡ | |
| ವಯಸ್ಸು: | 60 ವರ್ಷ | |
| ಕೆಲಸಃ | ವಿಶ್ರಾಂತಿ | |
| ವಾಸಸ್ಥಳ | ಅಟ್ಟಾವರ ಗ್ರಾಮ | |

ದಿನಾಂಕಃ 20/08/2024. ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಆರೋಪಿತರು ನನಗೆ ಗೊತ್ತು. 1 ನೇ ಆರೋಪಿ ಲೈನ್‌ಮೆನ್ ಆಗಿ ಕೆಲಸ ಮಾಡುತ್ತಾರೆ. 2 ನೇ ಆರೋಪಿ ನನಗೆ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. 1 ನೇ ಆರೋಪಿಯವರು ಊರಿಗೆ ಬರುತ್ತಿರುತ್ತಾರೆ, 2 ನೇ ಆರೋಪಿಯನ್ನು ನೋಡಿರುವುದಿಲ್ಲ. ನಾನು ಮುಂಚೆ ವ್ಯವಸಾಯ ಮಾಡುತ್ತಿದ್ದೆ.

2. ಸುಮಾರು 5-6 ವರ್ಷದ ಹಿಂದೆ ಬೆಳಿಗ್ಗೆ ಸುಮಾರು 9.00 ಗಂಟೆ ಸಮಯದಲ್ಲಿ ಜಮೀನಿನಿಂದ ಹುಲ್ಲನ್ನು ಮನೆಗೆ ತೆಗೆದುಕೊಂಡು ಬರುತ್ತಿದ್ದೆ. ಊರು ಸ್ವಲ್ಪ ದೂರ ಇದ್ದಾಗ ವಿದ್ಯುತ್ ವೈರ್ ಕಟ್ ಆಗಿ ನನ್ನ ತಲೆಯ ಮೇಲೆ ಬಿದ್ದಿರುತ್ತದೆ ಹಾಗೂ ಬಲಗೈಗೆ ಮತ್ತು ತಲೆಗೆ ವಿದ್ಯುತ್ ಶಾಕ್ ಆಗಿರುತ್ತದೆ. ನಂತರ ನಾನು ಕೆಳಗೆ ಬಿದ್ದಿರುತ್ತೇನೆ. ವಿದ್ಯುತ್ ವೈರ್ ಹಳೆಯದ್ದಾಗಿರುವುದರಿಂದ ಅದು ಕಟ್ ಆಗಿರುತ್ತದೆ. ಹಳೆಯ ವೈರ್ ಆಗಿದ್ದರಿಂದ 1 ನೇ ಆರೋಪಿಯೇ ಅಪಘಾತಕ್ಕೆ ಕಾರಣ.

3. ನಂತರ ಊರಿನ ಗ್ರಾಮಸ್ಥರಾದ ಚಾಸಾ-2 ಮತ್ತು 3 ರವರು ನನ್ನನ್ನು ದುದ್ದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಆಗುವುದಿಲ್ಲ ಎಂದು ಹೇಳಿದಕ್ಕೆ ಹಾಸನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಸುಮಾರು 20 ದಿವಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆಸ್ಪತ್ರೆಯಲ್ಲಿರುತ್ತೇನೆ. ಪೊಲೀಸರು ಆಸ್ಪತ್ರೆಗೆ ಬಂದರು, ಅವರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಹೇಳಿಕೆಯ ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

<u>ಪಾಟೀಸವಾಲುಃ ಎಸ್‌ಪಿಪಿ ರವರಿಂದಃ</u>

4. ದಿ. 17.10.2019 ರಂದು ಘಟನೆ ನಡೆದಿರುತ್ತದೆ ಎಂದರೆ ಸರಿ. ಗ್ರಾಮಸ್ಥರು ಆ ವೈರನ್ನು ಬದಲಾಯಿಸಬೇಕು ಎಂದು ಆರೋಪಿತರಿಗೆ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿತರ ನಿರ್ಲಕ್ಷ್ಯತನದಿಂದ ನನಗೆ ವೈರ್ ತಾಕಿ ಕರೆಂಟ್ ಶಾಕ್ ಹೊಡೆದಿರುತ್ತದೆ ಎಂದು ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ನಿರ್ಲಕ್ಷ್ಯತನದಿಂದ ಅಪಘಾತವಾಗಿದೆ ಎಂದರೆ ಗೊತ್ತಿಲ್ಲ. ಆರೋಪಿತರೇ ಈ ಅವಘಡಕ್ಕೆ ಕಾರಣವಾಗಿದೆ ಎಂದು ಗೊತ್ತಿದ್ದರೂ ನಾನು ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಕೆ ವಿ ಪರವಾಗಿ ಶ್ರೀ ಕೆ ಎನ್ ಎಸ್ ವಕೀಲರಿಂದಃ</u>

5. 1 ನೇ ಆರೋಪಿಯನ್ನು ಈ ಹಿಂದೆ ನಾನು ಯಾವತ್ತು ನೋಡಿರುವುದಿಲ್ಲ ಈ ದಿನವೇ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಗೊತ್ತಿಲ್ಲ. ನಿಪಿ-1 ದೂರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ

ಎಂದರೆ ಸರಿಯಲ್ಲ. ಆರೋಪಿಯವರ ನಿರ್ಲಕ್ಷ್ಯತನದಿಂದ ಅಪಘಾತದಿಂದ ಈ ಅಪಘಾತವಾಗಿಲ್ಲ ನನ್ನ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾ

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ